## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:- ಶ್ರೀ ಬಿ.ಮಲ್ಲಪ್ಪ, ನಿವೃತ್ತ ಕೃಷಿ ಸಹಾಯಕ ಇವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವ ಬಗ್ಗೆ.**

ಓದಲಾಗಿದೆ:- 1) ಕೃಷಿ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ವಿಚಾರಣೆ-4/7-ಮೈಸೂರು/2004-05, ದಿನಾಂಕ:29-12-2004.

2) ಕೃಷಿ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ವಿಚಾರಣೆ-4/7-ಮೈಸೂರು/2004-05, ದಿನಾಂಕ:07-05-2005.

3) ಸರ್ಕಾರದ ಆದೇಶ ಸಂಖ್ಯೆ:ಕೃತೋಇ 55 ಕೃಪವಿ 2007, ದಿನಾಂಕ:01-06-2010.

4) ಕೃಷಿ ಆಯುಕ್ತರ ಪತ್ರ ಸಂಖ್ಯೆ:ಸಿಬ್ಬಂದಿ-1/ವಿಚಾರಣೆ-4/ಮೈಸೂರು/7/2004-05. ದಿನಾಂಕ:02-10-2010.

******

**ಪ್ರಸ್ತಾವನೆ**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಕೃಷಿ ಆಯುಕ್ತರ ಕಛೇರಿ ಆದೇಶದಲ್ಲಿ, ಸರ್ಕಾರದ ವತಿಯಿಂದ ರೈತ ಸಮುದಾಯದ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎಸಗಿರುವ ಕರ್ತವ್ಯಚ್ಯುತಿಯನ್ನು ಮತ್ತು ಹಣದ ದುರುಪಯೋಗ ಮಾಡಿರುವ ಬಗ್ಗೆ ಶ್ರೀ ಬಿ.ಮಲ್ಲಪ್ಪ, ಕೃಷಿ ಸಹಾಯಕ ರವರನ್ನು ಅಮಾನತ್ತುಗೊಳಿಸಿದೆ, ಮತ್ತು ಕ್ರ.ಸಂ.(2)ರಲ್ಲಿನ ಆದೇಶದಲ್ಲಿ ಸದರಿ ಅಧಿಕಾರಿಗಳನ್ನು ಇಲಾಖಾ ವಿಚಾರಣೆ ಬಾಕಿಯಿರಿಸಿ, ಅಮಾನತ್ತು ಆದೇಶವನ್ನು ತೆರವುಗೊಳಿಸಿ ಕರ್ತವ್ಯಕ್ಕೆ ಪುನರ್ ನೇಮಿಸಿದೆ. ಕ್ರ.ಸಂ.(3)ರ ಆದೇಶದಲ್ಲಿ ಆರೋಪಗಳು ಸಾಬೀತಾಗದ ಕಾರಣ ಸದರಿ ಅಧಿಕಾರಿಗಳನ್ನು ದೋಷಮುಕ್ತಗೊಳಿಸಿದೆ. ಆದ್ದರಿಂದ ಕ್ರ.ಸಂ. (4)ರಲ್ಲಿ ಅವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವಂತೆ ಕೋರಿ ಮನವಿಯನ್ನು ಸಲ್ಲಿಸಿದ್ದಾರೆ. ಸದರಿಯವರ ಮನವಿಯನ್ನು ಪರಿಶೀಲಿಸಲಾಗಿ, ಅವರ ಮೇಲಿನ ಆರೋಪಗಳು ಸಾಬೀತಾಗದಿರುವುದರಿಂದ ಅವರನ್ನು ಆರೋಪಮುಕ್ತರನ್ನಾಗಿಸಿದೆ. ಆದ್ದರಿಂದ ಅವರ ಅಮಾನತ್ತಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 100(3)ರಂತೆ ಕರ್ತವ್ಯದ ಅವಧಿಯೆಂದು ಪರಿಗಣಿಸಲು ನಿರ್ಧರಿಸಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಕೃತೋಇ 72 ಕೃಪವಿ 2010, ಬೆಂಗಳೂರು, ದಿನಾಂಕ:31-12-2010**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಸರ್ಕಾರವು ಶ್ರೀ.ಬಿ.ಮಲ್ಲಪ್ಪ ನಿವೃತ್ತ ಕೃಷಿ ಸಹಾಯಕ ರವರ ದಿನಾಂಕ:29-12-2004ರಿಂದ ದಿನಾಂಕ:07/05/2005ರವರೆಗೆ ಅಮಾನತ್ತಿನಲ್ಲಿ

-2-

49

ಕಳೆದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 100(3)ರಂತೆ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಕೆ.ಗುರಾಣಿ) 1/1/11
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3. ಮಾನ್ಯ ಕೃಷಿ ಸಚಿವರ ಅಪ್ತ ಕಾರ್ಯದರ್ಶಿ.
4. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಕೃಷಿ ಇಲಾಖೆ ರವರ ಮೂಲಕ)
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಅಪ್ತ ಕಾರ್ಯದರ್ಶಿ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.